50 ಸುವರ್ಣ ಸಂಭ್ರಮ

# ಸಂಪಾದಕೀಯ

## 'ಚಿನ್ನದ ಹೆಜ್ಜೆ'ಯ ಸಂಭ್ರಮದಲ್ಲಿ...

ನಿಮ್ಮೆಲ್ಲರ ಅಚ್ಚು ಮೆಚ್ಚಿನ 'ಸುಧಾ'ಳಿಗೆ ಈಗ 50ರ ಸಂಭ್ರಮ. ವಾರಪತ್ರಿಕೆಯೊಂದು 50 ಸಂವತ್ಸರಗಳನ್ನು ತಲುಪಿಯೂ, ಲಕ್ಷಾಂತರ ಓದುಗರ ಮನೆ–ಮನಗಳನ್ನು ಹಿಂದಿನಷ್ಟೇ ದೈದೀಪ್ಯಮಾನವಾಗಿ ಬೆಳಗುತ್ತಿರುವುದು ನಿಜಕ್ಕೂ ಬಹುದೊಡ್ಡ ಸಂಗತಿ. 1965ರ ಜನವರಿ 11ರಂದು ಮೊದಲ 'ಸುಧಾ' ಸಂಚಿಕೆ ಪ್ರಕಟವಾದಾಗ ಕನ್ನಡನಾಡಿನ ಲಕ್ಷಾಂತರ ಜನರು ಯಾವ ಪ್ರೀತಿಯನ್ನು ಧಾರೆ ಎರೆದಿದ್ದರೋ, ಅದೇ ಪ್ರೀತಿಧಾರೆ ಈಗಲೂ ಮುಂದುವರಿದಿರುವುದು ನಮ್ಮ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ಸೌಭಾಗ್ಯವೇ ಸರಿ. ಇವತ್ತು ರಾಜ್ಯ, ಹೊರರಾಜ್ಯಗಳಲ್ಲದೆ ವಿಶ್ವದಾದ್ಯಂತ 'ಸುಧಾ' ಓದುಗರು ಹರಡಿದ್ದಾರೆ. ಅಂತರ್ಜಾಲದಲ್ಲಿ ಯಾವುದೋ ತಾಂತ್ರಿಕ ಅಡಚಣೆಯಿಂದ ಸಂಚಿಕೆ ತೆರೆದುಕೊಳ್ಳುವುದು ಸ್ವಲ್ಪ ತಡವಾದರೂ ದೂರದ ಆಸ್ಟ್ರೇಲಿಯಾ, ಕೆನಡಾ, ದುಬೈಗಳಿಂದ 'ಸುಧಾ' ಕಚೇರಿಗೆ ಓದುಗರ ಫೋನ್ ಕರೆಗಳು ಬರುತ್ತವೆ. ಈ 50 ವರ್ಷಗಳಲ್ಲಿ ಓದುಗರ ಹೊಸದೊಂದು ಪೀಳಿಗೆಯೇ ಹುಟ್ಟಿಕೊಂಡಿದೆ. ಹೊಸ ಕಾಲದ, ಹೊಸ ಪೀಳಿಗೆಯ ಅಗತ್ಯಗಳಿಗೆ, ಸಂವೇದನೆಗಳಿಗೆ ತಕ್ಕಂತೆ 'ಸುಧಾ' ಕೂಡಾ ಹಲವು ಬದಲಾವಣೆಗಳನ್ನು ಮುಕ್ತಮನದಿಂದ ಸ್ವೀಕರಿಸಿದೆ. ಒಂದು ಕಾಲದಲ್ಲಿ ಕಥೆ, ಕಾದಂಬರಿಗಳೇ ಪ್ರಮುಖ ಓದುಗ ಸೆಳೆತವಾಗಿದ್ದರೆ, ಈಗ ಅದರ ಜತೆಗೆ ಶಿಕ್ಷಣ, ಆರೋಗ್ಯ, ಫ್ಯಾಶನ್, ಪ್ರವಾಸ, ಟಿ.ವಿ ಅಂಕಣಗಳೂ ಸೇರಿಕೊಂಡಿವೆ. ಸಿನಿಮಾ ಅಂತೂ ಹಿಂದಿನಿಂದಲೂ ಓದುಗರ ಮನಸೆಳೆದ ವಿಭಾಗ. 70–80ರ ದಶಕದಲ್ಲಿ 'ಸುಧಾ'ದಲ್ಲಿ ಧಾರಾವಾಹಿಯಾಗಿ ಪ್ರಕಟವಾದ ಬಹುತೇಕ ಕಾದಂಬರಿಗಳು 'ಸೂಪರ್‌ಹಿಟ್' ಸಿನಿಮಾಗಳಾಗಿ ಬೆಳ್ಳಿತೆರೆಯನ್ನು ಅಲಂಕರಿಸಿದ್ದವು. ಇವತ್ತು ಸಹಸ್ರಾರು ಹೆಣ್ಣುಮಕ್ಕಳು ಮನೆಯಲ್ಲೇ ಟಿ.ವಿ ಧಾರಾವಾಹಿಗಳನ್ನು ನೋಡುತ್ತಾ, ಅಲ್ಲಿ ಕಂಡ ಓರೆ–ಕೋರೆಗಳನ್ನೆಲ್ಲ 'ಸುಧಾ' ಜತೆಗೆ ಹಂಚಿಕೊಳ್ಳುತ್ತಿದ್ದಾರೆ. ಬದಲಾಗುತ್ತಿರುವ ಮನರಂಜನೆಯ ವ್ಯಾಖ್ಯೆಯನ್ನು ಗುರುತಿಸುತ್ತಲೇ, ಓದುಗರನ್ನು ವಿಚಾರವಂತರಾಗಿ ಬೆಳೆಸುವ ಹೊಣೆಗಾರಿಕೆಯನ್ನೂ ಈ 50 ವರ್ಷಗಳಲ್ಲಿ 'ಸುಧಾ' ಸಮರ್ಥವಾಗಿ ನಿರ್ವಹಿಸಿಕೊಂಡು ಬಂದಿದೆ.

ಕನ್ನಡದ ಸಾಂಸ್ಕೃತಿಕ ಸೊಗಡನ್ನು ಬಿಂಬಿಸುತ್ತಾ ಅಕ್ಷರ ಲೋಕವನ್ನು ಶ್ರೀಮಂತಗೊಳಿಸಿದ ಕನ್ನಡದ ಹಳೇ ಪೀಳಿಗೆಯ ಬಹುದೊಡ್ಡ ಲೇಖಕ– ಲೇಖಕಿಯರು 'ಸುಧಾ' ಪತ್ರಿಕೆಯ ಜತೆಗೆ ತಮ್ಮ ಹೆಜ್ಜೆ ಗುರುತುಗಳನ್ನು ಮೂಡಿಸಿದ್ದಾರೆ. ಹಾಗೆಯೇ ಹೊಸ ತಲೆಮಾರಿನ ಕಥೆಗಾರರೂ, ಲೇಖಕರೂ 'ಸುಧಾ' ಜತೆಗೆ ಬೆಳೆದು ಬಂದಿದ್ದಾರೆ. ಹೊಸ ತಂತ್ರಜ್ಞಾನದ ಜತೆಗೆ ಹೊಸ ವಿನ್ಯಾಸದ ಪ್ರಯೋಗಗಳೂ ಯಶಸ್ವಿಯಾಗಿ ನಡೆದಿವೆ. 1965ರ ಜನವರಿಯಲ್ಲಿ ವ್ಯವಸ್ಥಾಪಕ ಸಂಪಾದಕರಾದ ಕೆ.ಎ.ನೆಟ್ಟಕಲ್ಲಪ್ಪ ಅವರ ನೇತೃತ್ವದಲ್ಲಿ ಮುದ್ರಿಸಿದ ಮೊದಲ ಸಂಚಿಕೆಯ ಅಷ್ಟೂ ಪ್ರತಿಗಳನ್ನು ಓದುಗರು ಒಂದೂ ಬಿಡದೆ ಹೇಗೆ ಖರೀದಿಸಿದರೋ, ಅದೇ ಪ್ರೀತಿ– ವಿಶ್ವಾಸ ಈಗಲೂ ಮುಂದುವರಿದಿದೆ. ಬಹುಭಾಷಿಕ ಕನ್ನಡಿಗ ಓದುಗರ ಸಂಖ್ಯೆ ಹೆಚ್ಚಾಗಿದ್ದರೂ, ಇಂಗ್ಲಿಷಿನ ಮೇಲೆ ಕನ್ನಡಿಗರ ಒಲವು ಒಂದು ತೂಕ ಹೆಚ್ಚೇ ಇದ್ದರೂ 'ಸುಧಾ'ದ ಮೇಲಿನ ಪ್ರೀತಿ ಮಾತ್ರ ಕಡಿಮೆಯಾಗಿಲ್ಲ. ಐಆರ್‌ಎಸ್ ಸಮೀಕ್ಷೆಯ ಪ್ರಕಾರ, ಒಟ್ಟು 8.84 ಲಕ್ಷ ಓದುಗರನ್ನು ಹೊಂದಿ ಕನ್ನಡ ವಾರಪತ್ರಿಕೆಗಳ ಪೈಕಿ ಮೊದಲ ಸ್ಥಾನದಲ್ಲಿರುವ 'ಸುಧಾ', 20–39 ವಯೋಮಾನದ ಓದುಗರ ಅತ್ಯಂತ ನೆಚ್ಚಿನ ಪತ್ರಿಕೆಯಾಗಿದ್ದು, ಹಳೆಯ ಮತ್ತು ಹೊಸ ಪೀಳಿಗೆಯ ಓದುಗರ ನಡುವಣ ಕೊಂಡಿಯಂತಿದೆ.

50 ವರ್ಷಗಳ ಹಿಂದೆ ಮೊದಲ ಸಂಚಿಕೆಗೆ ಬರೆದ ಮುನ್ನುಡಿಯಲ್ಲಿ ನಮ್ಮ ಸಂಸ್ಥೆಯ ಗೌರ್ನಿಂಗ್ ಡೈರೆಕ್ಟರ್ ಕೆ.ಎನ್.ಗುರುಸ್ವಾಮಿಯವರು ಹೀಗೆ ನಿವೇದನ ಮಾಡಿದ್ದರು– 'ಕನ್ನಡ ರಾಜ್ಯದ ಮನೆ ಮಂದಿಯೆಲ್ಲಾ ಓದಿ ಆನಂದಿಸುವ ಉತ್ತಮ ವಾರಪತ್ರಿಕೆಯೊಂದರ ಅಗತ್ಯವಿದೆ ಎಂದು ನಮಗೆ ಅರಿವಾಗಿದೆ. ಈ ವಾಚಕಕೋಟಿಯ ಹೆಬ್ಬಯಕೆ ಈಡೇರಿಸಲು 'ಸುಧಾ' ಎಂಬ ಹೆಸರಿನ ಈ ಕನ್ನಡ ವಾರಪತ್ರಿಕೆಯನ್ನು ನಮ್ಮ ಕಾಣಿಕೆಯಾಗಿ ಅರ್ಪಿಸುತ್ತಿದ್ದೇವೆ. ನಮ್ಮ ಅಸಂಖ್ಯಾತ ವಾಚಕರ, ಅಭಿಮಾನಿಗಳ, ಜಾಹೀರಾತುದಾರರ ಹಾಗೂ ಇಡೀ ಕನ್ನಡ ರಸಿಕ ಬಾಂಧವರ ಅಭಿಮಾನ, ಆಶೀರ್ವಾದಗಳೇ ನಮ್ಮ ರಕ್ಷೆ.'

ಈಗಲೂ ನಮ್ಮದು ಅದೇ ವಿನೀತ ಭಾವ. ನೀವಿಲ್ಲದೆ ನಾವಿಲ್ಲ. ಗೆದ್ದಾಗ ಬೆನ್ನು ತಟ್ಟಿ, ಎಡವಿದಾಗ ಎಚ್ಚರಿಸಿ. ನಿಮ್ಮ ಪ್ರೀತಿ– ಅಭಿಮಾನ ಹೀಗೆಯೇ ಮುಂದುವರಿಯಲಿ ಎಂದು ವಿನಯದಿಂದ ಕೋರುತ್ತೇನೆ.

■ ಕೆ.ಎನ್.ತಿಲಕ್ ಕುಮಾರ್

ಐಆರ್‌ಎಸ್ ಸಮೀಕ್ಷೆಯ ಪ್ರಕಾರ, ಒಟ್ಟು 8.84 ಲಕ್ಷ ಓದುಗರನ್ನು ಹೊಂದಿ ಕನ್ನಡ ವಾರಪತ್ರಿಕೆಗಳ ಪೈಕಿ ಮೊದಲ ಸ್ಥಾನದಲ್ಲಿರುವ 'ಸುಧಾ', 20–39 ವಯೋಮಾನದ ಓದುಗರ ಅತ್ಯಂತ ನೆಚ್ಚಿನ ಪತ್ರಿಕೆಯಾಗಿದ್ದು, ಹಳೆಯ ಮತ್ತು ಹೊಸ ಪೀಳಿಗೆಯ ಓದುಗರ ನಡುವಣ ಕೊಂಡಿಯಂತಿದೆ

